# ಕನ್ನಡ ಡಿಜಿಟಲ್ ಸಾಹಿತ್ಯ: ಸವಾಲು ಮತ್ತು ಸಾಧ್ಯತೆಗಳು

**ಡಾ. ಅನ್ನಪೂರ್ಣ ಗುಡುದೂರು**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕಂಪ್ಲಿ.

**Article Link:** https://aksharasurya.com/2023/07/annapurna-gududuru/

21ನೆಯ ಶತಮಾನದ ಕನ್ನಡ ಸಾಹಿತ್ಯದ ಚಟುವಟಿಕೆಗಳು ಈ ಹಿಂದಿನ ಸಾಹಿತ್ಯ ಘಟ್ಟಗಳ ಪ್ರೇರಣೆ ಮತ್ತು ಪ್ರಭಾವಗಳಿಂದಾಗಿ ಹಾಗೂ ಇಂದಿನ ಆಧುನಿಕತೆಯ ಅಗತ್ಯಕ್ಕನುಗುಣವಾಗಿ ವಿನೂತನವಾದ ಛಾಪಿನಿಂದ ವೈವಿಧ್ಯಮಯವಾಗಿ ಕಂಗೊಳಿಸುತ್ತಿದೆ. ಇದರ ಬಹುಪಾಲು ಆಶಯ ಸಾಹಿತ್ಯ ಪ್ರಚಾರದ ಜೊತೆಗೆ ಮಾಹಿತಿ ಹಂಚಿಕೆಯೂ, ಸಮಕಾಲೀನ ಸಾಮಾಜಿಕ ತಲ್ಲಣಗಳ ದನಿಯಾಗಿಯೂ, ಸಮಾಜದ ಅಸಮಾನತೆಗಳನ್ನು ಬಿಂಬಿಸುವ ಕನ್ನಡಿಯಾಗಿಯೂ, ಮೋಸ–ಭ್ರಷ್ಟಾಚಾರಗಳ ವಿರುದ್ಧದ ಕಿಡಿಯಾಗಿಯೂ, ಅಂಧಶ್ರದ್ಧೆ, ಕುರುಡು ನಂಬಿಕೆಗಳು, ಜಾತೀಯತೆ, ಆಧುನಿಕತೆಯ ತುಡಿತ ಮುಂತಾದ ಸಾಮಾಜಿಕ ಅಂಶಗಳನ್ನು ತನ್ನ ವಸ್ತುವಾಗಿ ಒಳಗೊಂಡು ನಾಗರೀಕತೆಯೊಂದಿಗೆ ಮಾನವೀಯತೆಯ ಸಮಾಜವನ್ನು ಕಟ್ಟುವ ನೆಲೆಯಲ್ಲಿ ಸಾಹಿತ್ಯದ ರಚನೆ ಮತ್ತು ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಇದರ ಜೊತೆಗೆ ವಾಣಿಜ್ಯ, ವಿಜ್ಞಾನ, ಕ್ರೀಡೆ, ವೈದ್ಯಕೀಯ, ಶೈಕ್ಷಣಿಕ ಹೀಗೆ ಮಾಹಿತಿ ಪ್ರಧಾನ ಸಾಹಿತ್ಯವನ್ನು ಸಹ 21ನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ಗುರುತಿಸಬಹುದು.

21ನೆಯ ಶತಮಾನದ ಸಾಹಿತ್ಯವೆಂದ ಮೇಲೆ ಅಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಭಾಷೆಗಳ ಸಾಹಿತ್ಯವನ್ನೂ ಅದು ಒಳಗೊಂಡಿರುತ್ತದೆ. ಇದರೊಳಗೆ ಕನ್ನಡ ಸಾಹಿತ್ಯವೂ ಒಂದಾಗಿದ್ದು, ಜಾಗತಿಕ ಮಟ್ಟದಲ್ಲಿ ಕನ್ನಡ ಸಾಹಿತ್ಯವೂ ನವಲೇಖಕರು ಮತ್ತು ಉತ್ಸಾಹಿ ಓದುಗ ವರ್ಗದ ದೆಸೆಯಿಂದ ಡಿಜಿಟಲ್ ರೂಪ ಪಡೆದು ತನ್ನ ಕಂಪನ್ನು ಜಗದಗಲ ವಿಸ್ತರಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಈ ಶತಮಾನ ಎಲ್ಲರಿಗೂ ತಿಳಿದಿರುವಂತೆ ಸ್ಮಾರ್ಟ್‌ಯುಗವಾಗಿದೆ. ಎಲ್ಲವನ್ನೂ ಸಂಕುಚಿತಗೊಳಿಸಿಕೊಂಡು ತನ್ನೊಳಗೆ ಅಡಗಿಸಿಕೊಂಡಿರುವ 'ಸಂಕೀರ್ಣಯುಗ'ವಾಗಿದೆ. ಈ ಯುಗದ ಬಹುತೇಕ ಸಾಹಿತ್ಯವು ಕಾಗದದ ಮಾಧ್ಯಮಕ್ಕಿಂತ ಡಿಜಿಟಲ್ ಮಾಧ್ಯಮದಿಂದಲೇ

ಹೆಚ್ಚು ಪ್ರಚಾರ ಪಡೆಯುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಸೃಜನಶೀಲ ಅಥವಾ ಸೃಜನೇತರ ಸಾಹಿತ್ಯಗಳೆಲ್ಲವೂ ಇಂದು ಡಿಜಿಟಲ್ ಮಾಧ್ಯಮದಲ್ಲಿ ಪ್ರಕಟಗೊಳ್ಳುತ್ತಿರುವ ಸ್ವರೂಪಗಳನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಈ ತಂತ್ರಜ್ಞಾನದ ಯುಗದಲ್ಲಿ ತಂತ್ರಜ್ಞಾನವನ್ನು ಆಡುಮಾತಿನ ವಲಯದಲ್ಲಿಯೂ ಮತ್ತು ಬರೆಹದ ವಲಯದಲ್ಲಿಯೂ ತೀವ್ರವಾಗಿ ಪ್ರಭಾವಿಸಿ ಸಾಹಿತ್ಯದ ಕಾರ್ಯಚಟುವಟಿಕೆಗಳಿಗೆ ಹೊಸ ಸವಾಲುಗಳನ್ನು ಮತ್ತು ಸಾಧ್ಯತೆಗಳನ್ನು ತಂದೊಡ್ಡಿವೆ.

ಸಾಹಿತ್ಯದ ಬರೆವಣಿಗೆ ಮತ್ತು ಪ್ರಕಟಣೆಯಿಂದ ಆರಂಭಗೊಂಡು ಅದನ್ನು ಹಂಚಿಕೊಳ್ಳುವ ಮತ್ತು ಆ ಬರೆವಣಿಗೆಯನ್ನು ಕುರಿತು ಚರ್ಚೆ ಸಂವಾದಗಳನ್ನು ಮಾಡುವವರೆಗೂ ಡಿಜಿಟಲ್ ಮಾಧ್ಯಮಗಳು ಪ್ರಮುಖ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುತ್ತಿವೆ. ಈ ನಿಟ್ಟಿನಲ್ಲಿ ಕ್ಲಬ್‌ಹೌಸ್, ಬುಕ್‌ಬ್ರಹ್ಮ, ಯುವರ್ ಕೋಟ್, ಪ್ರತಿಲಿಪಿ, ಕೂ ಹಾಗೂ ಅವಧಿ, ಕೆಂಡಸಂಪಿಗೆಯಂತಹ ಕನ್ನಡದ ಹಲವಾರು ಬ್ಲಾಗ್‌ಗಳು, ಆನ್‌ಲೈನ್ ಪತ್ರಿಕೆಗಳು ಮುಂತಾದವುಗಳನ್ನು ಡಿಜಿಟಲ್ ಸಾಹಿತ್ಯ ಮಾಧ್ಯಮದ ರೂವಾರಿಗಳೆಂದು ಗುರುತಿಸಬಹುದಾಗಿದೆ. ಇತ್ತೀಚಿಗೆ ಆನ್‌ಲೈನ್ ಸ್ಪರ್ಧೆಗಳು, ಆನ್‌ಲೈನ್ ವಿಚಾರ ಸಂಕಿರಣ, ವಿಶೇಷ ಉಪನ್ಯಾಸಗಳಂತಹ ಕಾರ್ಯಕ್ರಮಗಳು ಪ್ರಚಾರಕ್ಕೆ ಬಂದು ಕನ್ನಡ ಸಾಹಿತ್ಯದ ಕಂಪನ್ನು ಹರಡುತ್ತಿವೆ. 2019 ರ ಅಂತ್ಯದಲ್ಲಿ ಜಗತ್ತಿಗೆ ಸಾಂಕ್ರಾಮಿಕ ಪಿಡುಗು ಕೋವಿಡ್ ಹತ್ತಿಕೊಂಡಾಗ ಕ್ಲಬ್‌ಹೌಸ್, ಋತುಮಾನ ಮುಂತಾದ ಆನ್‌ಲೈನ್ ವೇದಿಕೆಗಳು ಶಿಕ್ಷಣ, ವಾಣಿಜ್ಯ, ಸಾಮಾಜಿಕ, ವೈದ್ಯಕೀಯ ವಿಚಾರಗಳನ್ನು ತಲುಪಿಸಲು ಸಹಾಯಕವಾಗಿರುವುದನ್ನು ಗಮನಿಸಬಹುದಾಗಿದೆ. ಈ ವೇದಿಕೆಯಲ್ಲಿ ಸಾಹಿತ್ಯ ಸಾಂಸ್ಕೃತಿಕ ವಿಚಾರಗಳನ್ನು ದಿನನಿತ್ಯ ನಿರಂತರವಾಗಿ ಆಸಕ್ತರು ಹಂಚಿಕೊಳ್ಳುವ ಮೂಲಕ ಮತ್ತಷ್ಟು ವೇಗವಾಗಿ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ ಎಂಬುದನ್ನು ಮನಗಾಣಬಹುದು.

ಇನ್ನು ಫೇಸ್‌ಬುಕ್, ಟೆಲಿಗ್ರಾಮ್, ವಾಟ್ಸ್‌ಫ್‌ಗ್ರೂಪ್‌ಗಳಲ್ಲಿ ಸಾಹಿತ್ಯ ಚರ್ಚೆ, ಸಾಹಿತ್ಯ ಪ್ರಚಾರ ಕೇಂದ್ರಿತವಾದ ಗುಂಪುಗಳು ರಚನೆಗೊಂಡು ಸಾಹಿತ್ಯ ರಚನೆ, ಮಾಹಿತಿಗಳನ್ನು ಹಂಚಿಕೊಳ್ಳುವುದು ಮತ್ತು ಪ್ರಚಾರಗಳಲ್ಲಿ ಮೈಲುಗಲ್ಲು ಸಾಧಿಸಲು ಹೊರಟಿರುವಂತಿದೆ. ಇಲ್ಲಿ ಎಲ್ಲರಿಗೂ ಸಾಹಿತ್ಯ ಆಸಕ್ತದಾಯಕವಾದದ್ದೇ ಆಗಿರುತ್ತದೆ. ಸಾಹಿತ್ಯಕ ಬರೆಹಗಳನ್ನು ಆಸಕ್ತಿಯಿಂದ ಓದುವ ಪ್ರತಿಕ್ರಿಯಿಸುವ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

ಓಟದ ಬದುಕಿನ ನಡುವೆ ಜನರು ತಮ್ಮ ಎಲ್ಲಾ ಕೆಲಸಕಾರ್ಯಗಳನ್ನು ಅತಿ ಬೇಗನೆ ಮುಗಿಸುವ ಹುನ್ನಾರದಲ್ಲಿದ್ದಾರೆ. ಅವರ ದಿನಬಳಕೆಯ ವಸ್ತುಗಳು ಆಧುನೀಕರಣಗೊಳ್ಳುತ್ತಿವೆ. ಹೊಸ ಹೊಸ ಆವಿಷ್ಕಾರಗಳ ದೆಸೆಯಿಂದ ಹೊಸ ಮಾದರಿಯ ಯಂತ್ರಗಳು ತಯಾರಾಗುತ್ತಿವೆ. ವಾಹನಗಳ ವಿನ್ಯಾಸದಲ್ಲಿ ಬದಲಾವಣೆಗಳು, ಮೊಬೈಲ್ ಫೋನ್, ಸ್ಮಾರ್ಟ್ ಫೋನ್‌ಗಳಲ್ಲಿನ ಬದಲಾವಣೆಗಳು, ನಗದು ರಹಿತ ಹಣಕಾಸು ವ್ಯವಸ್ಥೆ, ವಾಣಿಜ್ಯ ಮಾರುಕಟ್ಟೆಯಲ್ಲಿನ ಬದಲಾವಣೆಗಳು ಹೀಗೆ ಎಲ್ಲವೂ ಸಂಕುಚಿತಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.

ಕಾಗದ ಹಾಗೂ ಲೇಖನಿಗಳಿಂದ ಸಾಹಿತ್ಯವು ದಾಖಲಾಗುವ ಸನ್ನಿವೇಶಗಳಲ್ಲಿ ಇಂದು ಸಾಕಷ್ಟು ಬದಲಾವಣೆಗಳಾಗಿವೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸಾಹಿತ್ಯ ಪ್ರಸಾರಗೊಳ್ಳುತ್ತಿರುವ ಸ್ವರೂಪವನ್ನು ಗಮನಿಸೋಣ. ಇಂದು ಫೇಸ್‌ಬುಕ್ ಅತಿ ಹೆಚ್ಚು ಪ್ರಸಿದ್ಧಿ ಪಡೆದಿರುವ ಸಾಮಾಜಿಕ ಜಾಲತಾಣವಾಗಿದೆ. ಸಮಾನ ಅಥವಾ ವಿಭಿನ್ನ ಅಭಿರುಚಿಯಿರುವ ಸ್ನೇಹಿತರನ್ನು ಪಡೆಯಲು, ಚಿತ್ರಗಳು, ವೀಡಿಯೋ, ತಮ್ಮ ಅನುಭವದ ಬರೆಹಗಳನ್ನು ವಿನಿಮಯ ಮಾಡಿಕೊಳ್ಳಲು ಇದು ಪರಿಣಾಮಕಾರಿಯಾದ ವೇದಿಕೆಯಾಗಿದೆ. ಇದರ ಜೊತೆಗೆ ಸಾಹಿತ್ಯದ ಕುರಿತಾದ ಚರ್ಚೆ ಹಾಗೂ ಇನ್ನಿತರ ವಿಷಯ ವಿನಿಮಯಕ್ಕಾಗಿ ಅವಕಾಶವಿದೆ.

ಪ್ರಸ್ತುತದಲ್ಲಿ 'ಡಿವಿಜಿ ಮಂಕುತ್ತಿಮ್ಮನ ಕಗ್ಗ' ಎಂಬ ಪುಟದಲ್ಲಿ ಡಿವಿಜಿಯವರ ಮಂಕುತಿಮ್ಮನ ಕಗ್ಗ ಕುರಿತಾದ ಚರ್ಚೆ, ಅದರ ಕುರಿತಾದ ವಿಮರ್ಶೆಗಳನ್ನೂ ಕಾಣಬಹುದಾಗಿದೆ. ಅದರಂತೆಯೇ 'ಕುವೆಂಪು ಓದು', 'ಕೆ.ಪಿ.ಪೂರ್ಣಚಂದ್ರ ತೇಜಸ್ವಿ' ಮುಂತಾದ ಪುಟಗಳು ಆಯಾ ಲೇಖಕರ ಬರಹಗಳ ಕುರಿತ ಹೊಸ ಚರ್ಚೆ ಹಾಗೂ ವಿಮರ್ಶೆಗಳಿಗೆ ಅವಕಾಶ ಕಲ್ಪಿಸಿರುವುದನ್ನು ಗಮನಿಸಬಹುದಾಗಿದೆ. ಇವುಗಳ ಜೊತೆಗೆ 'ಕವನಗಳ ತೊಟ್ಟಿಲು', 'ನ್ಯಾನೋ ಕಥೆ–ಕವನಗಳು' ಮುಂತಾದ ಪುಟಗಳು ಹೊಸ ಬರಹಗಾರರಿಗೆ ಸಾಹಿತ್ಯ ನಿರ್ಮಿಸಲು ವೇದಿಕೆ ಕಲ್ಪಿಸಿಕೊಟ್ಟಿವೆ. 'ನಮ್ಮ ಪುಸ್ತಕ', 'ಕಾಚಕ್ಕಿ ಪ್ರಕಾಶನ', 'ಪುಸ್ತಕ ಲೋಕ', 'ಪುಸ್ತಕ ಅವಲೋಕನ', 'ಬುಕ್‌ಬ್ರಹ್ಮ' ಮುಂತಾದ ಪುಟಗಳು ಹೊಸದಾಗಿ ಸೃಷ್ಟಿಯಾಗುವ, ಬಿಡುಗಡೆಯಾಗಿರುವ ಪುಸ್ತಕಗಳ ಕುರಿತಾದ ಚರ್ಚೆಗೆ, ಪ್ರಚಾರಕ್ಕೆ ವೇದಿಕೆ ಕಲ್ಪಿಸಿರುವುದನ್ನು ಗಮನಿಸಬಹುದಾಗಿದೆ. ಈ ಎಲ್ಲಾ ವೇದಿಕೆಗಳಲ್ಲಿ ಓದುಗರು ತಾವು ಓದಿದ ಪುಸ್ತಕಗಳ ಕುರಿತಾದ ಚರ್ಚೆ, ವಿಮರ್ಶೆ ಹಾಗೂ ಹೊಸದಾಗಿ ಬಂದಿರುವ ಪುಸ್ತಕಗಳ ಕುರಿತಾದ ಪರಿಚಯ ಮುಂತಾದ ಸಂಗತಿಗಳನ್ನು ಹಂಚಿಕೊಳ್ಳಲು ಅವಕಾಶವಿದೆ.

ಫೇಸ್‌ಬುಕ್‌ನಂತೆಯೇ ಇನ್‌ಸ್ಟಾಗ್ರಾಮ್ ಕೂಡ ಸಾಮಾಜಿಕ ಜಾಲತಾಣವಾಗಿದೆ. ಇದರಲ್ಲಿಯೂ ಸಹ ಫೋಟೋ, ವೀಡಿಯೋಗಳ ಜೊತೆಗೆ ಸಾಹಿತ್ಯಕ ವಿಚಾರಗಳನ್ನು ಚರ್ಚಿಸಲು ಅವಕಾಶವಿದೆಯಾದರೂ ಫೇಸ್‌ಬುಕ್‌ನಲ್ಲಿ ಆಗುವಷ್ಟು ಪರಿಣಾಮಕಾರಿಯಾಗಿರುವುದಿಲ್ಲ. ಆದರೆ ಯುವಲೇಖಕರು ತಾವು ಬರೆದ ಚುಟುಕು ಸಾಹಿತ್ಯ, ಚಿತ್ರಸಹಿತವಾದ ಸಾಹಿತ್ಯವನ್ನು ಹಂಚಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಸಾಹಿತ್ಯ ಸೃಷ್ಟಿಯನ್ನೇ ಕೇಂದ್ರವಾಗಿರಿಸಿಕೊಂಡು ಮೈತಳೆದಿರುವ ಅಂತರ್ಜಾಲ ತಾಣಗಳಲ್ಲಿ ಯುವರ್ ಕೋಟ್ ಅತ್ಯಂತ ಪ್ರಮುಖವಾದ ತಾಣವೆಂದು ಹೇಳಬಹುದು. ಇದರಲ್ಲಿರುವ ಯುವರ್‌ಕೋಟ್ ಬಾಬಾ, ಯುವರ್ ಕೋಟ್ ಜೋಗಿ ಎಂಬ ವ್ಯವಸ್ಥಾಪಕರು ಬರಹಗಾರರಿಗೆ ಅನೇಕ ಸಲಹೆ ಸುಳಿವುಗಳನ್ನು ನೀಡುವುದರ ಮೂಲಕ ಸಾಹಿತ್ಯ ಸೃಷ್ಟಿಗೆ ಪ್ರೇರೇಪಿಸುತ್ತಾರೆ. ಕವನ ರಚನೆ, ಚುಟುಕು, ಗಜಲ್, ಹೈಕು ಮುಂತಾದ ಮಾದರಿಯಲ್ಲಿ ಸಾಹಿತ್ಯ ರಚಿಸಲು ಕರೆ ನೀಡಲಾಗುತ್ತದೆ. ಜೊತೆಗೆ ಒಬ್ಬರು ರಚಿಸಿದ ಸಾಹಿತ್ಯಕ್ಕೆ ಮತ್ತೊಬ್ಬರು ಅದೇ ಸಾಹಿತ್ಯಕ್ಕೆ ಪ್ರತಿಕ್ರಿಯಿಸುವ ಅವಕಾಶವಿದೆ. ಕವಿತೆಗೆ ಕವಿತೆ, ಹೈಕಿಗೆ ಹೈಕು ಹೀಗೆ ವೈವಿಧ್ಯ ಹಾಗೂ ವಿಶೇಷವಾದ ರೀತಿಯಲ್ಲಿ ಸಾಹಿತ್ಯ ಸೃಜಿಸುವ ವೇದಿಕೆ ಇದಾಗಿದೆ. ಯುವರ್ ಕೋಟ್ ವೇದಿಕೆ ಕೇವಲ ಸಾಹಿತ್ಯ ಸೃಷ್ಟಿ ಮಾತ್ರವಲ್ಲ. ಸಾಹಿತ್ಯ ಪ್ರಚಾರಕ್ಕೂ ಸಹ ಅವಕಾಶ ಕಲ್ಪಿಸುತ್ತದೆ. ಆ ವೇದಿಕೆಯನ್ನು ಬಳಸುವ ಸಾಹಿತಿಯು ತಾನು ರಚಿಸಿದ ಕವಿತೆಗಳನ್ನು (ಸಾಹಿತ್ಯವನ್ನು) ಯುವರ್ ಕೋಟ್ ಇತರ ಭಾಷೆಗಳೊಂದಿಗೆ ಕನ್ನಡ ಭಾಷೆಯಲ್ಲಿಯೂ ಸಾಹಿತ್ಯ ರಚಿಸಲು ಅವಕಾಶ ನೀಡಿರುವುದರಿಂದ 21ನೆಯ ಶತಮಾನದ ಡಿಜಿಟಲ್ ಕನ್ನಡ ಸಾಹಿತ್ಯ ನಿರ್ಮಿಸುವ ವೇದಿಕೆಯಾಗಿ ಕಂಡುಬರುತ್ತದೆ.

ಪ್ರತಿಲಿಪಿಯೂ ಸಹ ಯುವರ್ ಕೋಟ್ ನಂತೆಯೇ ಸಾಮ್ಯತೆಯುಳ್ಳ ಡಿಜಿಟಲ್ ಸಾಹಿತ್ಯ ಸೃಜಿಸುವ ವೇದಿಕೆಯಾಗಿದೆ. ಇದರಲ್ಲಿ ಯುವರ್ ಕೋಟ್‌ನಂತೆ ಸಾಹಿತ್ಯ ರಚಿಸಲು ಮಾರ್ಗದರ್ಶಕರು, ಸಲಹೆಗಾರರು ಇರುವುದಿಲ್ಲ. ಇದೊಂದು ಸ್ವತಂತ್ರ ಸಾಹಿತ್ಯ ಸೃಜನೆಯ ವೇದಿಕೆಯಾಗಿದೆ. ಒಬ್ಬರು ಬರೆದ ಲೇಖನಕ್ಕೆ ಮತ್ತೊಬ್ಬರು ಪ್ರತಿಕ್ರಿಯೆ ನೀಡುವ / ವಿಮರ್ಶೆ ಮಾಡುವ ಅವಕಾಶವಿದೆ.

ವಾಟ್ಸ್‌ಪ್ ಮತ್ತು ಟೆಲಿಗ್ರಾಮ್‌ಗಳು ಮೇಲೆ ವಿವರಿಸಿದ ವೇದಿಕೆಗಳಿಗಿಂತ ವಿಭಿನ್ನ ಸ್ವರೂಪದ ಮಾಧ್ಯಮಗಳಾಗಿವೆ. ಇವುಗಳಲ್ಲಿ ವಾಯ್ಸ್ ಕಾಲ್ ಮೂಲಕ, ವೀಡಿಯೋ ಕಾನ್ಫೆರೆನ್ಸ್ ಮೂಲಕ ಸಂಪರ್ಕ ಸಾಧಿಸಿ ಚರ್ಚೆ ವಿಚಾರ ಸಂಕಿರಣ

ನಡೆಸಲು ಸಾಕಷ್ಟು ಅವಕಾಶಗಳಿವೆ. ಇವುಗಳು ಪರೋಕ್ಷವಾಗಿ ಡಿಜಿಟಲ್ ಸಾಹಿತ್ಯದ ಬೆಳವಣಿಗೆಗೆ ಪೂರಕವಾಗಿ ಕೆಲಸಮಾಡುತ್ತಿವೆ. ಇವುಗಳಂತೆ ಜ಼ೂಮ್, ಗೂಗಲ್ ಮೀಟ್, ಕ್ಲಬ್ ಹೌಸ್, ಯೂಟೂಬ್ ಮುಂತಾದ ತಾಣಗಳೂ ಸಾಮಾಜಿಕ ಸಂಪರ್ಕ ತಾಣಗಳಾಗಿವೆ. 2020 ರ ವೇಳೆಯಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗ ಜಗತ್ತನ್ನು ಕಾಡಿದ ಸಂದರ್ಭದಲ್ಲಿ ಈ ಎಲ್ಲಾ ವೇದಿಕೆಗಳು ಶಿಕ್ಷಣ, ವಾಣಿಜ್ಯ ಹಾಗೂ ಇನ್ನಿತರ ಪ್ರಮುಖ ಕ್ಷೇತ್ರಗಳಿಗೆ ಸಂಪರ್ಕ ಸಾಧಿಸಲು ಸಹಾಯಕವಾಗಿರುವುದು ಗಮನಾರ್ಹ ಸಂಗತಿ. ಇವುಗಳ ಮೂಲಕ ಪುಸ್ತಕಗಳ ಪಿಡಿಎಫ್ ಕಳುಹಿಸಲು ಸಹ ಅವಕಾಶವಿದೆ. ವಿದ್ಯಾರ್ಥಿಗಳು ಅಥವಾ ಉಪಯೋಗಕಾರರು ತಮ್ಮ ಮೊಬೈಲ್‌ನಲ್ಲಿಯೆ ತಮಗೆ ಬೇಕಾದ ಮಾಹಿತಿಯನ್ನು ಕೇಳುವ, ಹೇಳುವ, ಓದುವ ಅವಕಾಶ ಕಲ್ಪಿಸಿಕೊಟ್ಟಿವೆ. ಯೂಟೂಬ್ ಇಂದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಅಂದು ಇದು ಕೇವಲ ಮನರಂಜನೆಯ ಮಾಧ್ಯಮವಾಗಿತ್ತು. ಇಂದು ಇದು ಶೈಕ್ಷಣಿಕ ಮತ್ತು ಸಂಶೋಧನಾತ್ಮಕವಾಗಿ ಹೆಚ್ಚಾಗಿ ಬಳಕೆಯಾಗುತ್ತಿರುವುದು ಗಮನಿಸಬೇಕಾದ ಸಂಗತಿ.

ಹೀಗೆ 21 ಶತಮಾನದ ಡಿಜಿಟಲ್ ಕನ್ನಡ ಸಾಹಿತ್ಯವು ಪ್ರಸ್ತುತದಲ್ಲಿ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದಾಗಿದೆ. ಇತ್ತೀಚಿಗೆ ಅಥವಾ ಮುಂದಿನ ದಿನಗಳಲ್ಲಿ ಮೇಲೆ ಹೇಳಿರುವ ತಾಣಗಳನ್ನೇ ಹೋಲುವ ಅಥವಾ ಅವುಗಳಿಗಿಂತಲೂ ಉತ್ತಮವಾದ ತಾಣಗಳು ಸೃಷ್ಟಿಯಾಗಬಹುದು. ಏನೇ ಆದರೂ ಸಾಹಿತ್ಯವು ನಾವು ಪುಸ್ತಕಗಳನ್ನು ಕಾಗದದ ಪುಸ್ತಕ ಓದಿದಾಗ ಸಿಗುವ ಅನುಭವಕ್ಕೂ ಈ ರೀತಿ ಡಿಜಿಟಲ್ ಮಾಧ್ಯಮಗಳಲ್ಲಿ ಓದುವುದಕ್ಕೂ ಅನೇಕ ವ್ಯತ್ಯಾಸ ಇರುವುದಂತೂ ನಿಜವಾಗಿದೆ. ಡಿಜಿಟಲ್ ಸಾಹಿತ್ಯದ ಓದುಗರು ಯಾರು? ಅದು ಎಷ್ಟು ಓದುಗರನ್ನು ತಲುಪುತ್ತದೆ? ಹೇಗೆ ಪರಿಣಾಮ ಬೀರುತ್ತದೆ ಮುಂತಾದ ಸಮೀಕ್ಷೆಗಳನ್ನು ಈ ಸಂದರ್ಭದಲ್ಲಿ ಮಾಡಿದರೆ ಅದರ ಫಲಿತ ಅಷ್ಟು ಆಶಾದಾಯಕವೇನಲ್ಲ ಎಂಬುದು ನಮಗೆ ತಿಳಿಯುತ್ತದೆ. ಆದರೆ ಪ್ರಸ್ತುತ ಸಮಾಜವು ತಾವು ಹೋಗುವ ಜಾಗಗಳಿಗೆಲ್ಲಾ ಪುಸ್ತಕವನ್ನು ಹೊತ್ತೊಯ್ಯಲಾಗದೆ ತಮ್ಮ ಸ್ಮಾರ್ಟ್‌ಫೋನ್ ಹಾಗು ಪರ್ಸನಲ್ ಕಂಪ್ಯೂಟರ್‌ಗಳಲ್ಲಿ ಕಾಣಬಹುದಾದ 'ಡಿಜಿಟಲ್ ಸಾಹಿತ್ಯದ' ಮೊರೆಹೋಗಿರುವುದು ಅನಿವಾರ್ಯವೋ ಎನ್ನಿಸುತ್ತದೆ.